# ಕುವೆಂಪು ಅವರ ಸಾಮಾಜಿಕ ಕಳಕಳಿ

◆ ಕೋ. ಚೆನ್ನಬಸಪ್ಪ

"ಶ್ರೀರಾಮಕೃಷ್ಣ-ವಿವೇಕಾನಂದರ ಸಾಹಿತ್ಯವನ್ನು ಕನ್ನಡ ನಾಡಿನ ಜನತೆಗೆ ತಲುಪಿಸಲು ಕುವೆಂಪು ವಹಿಸಿದ ಶ್ರಮವನ್ನು ಕೃತಜ್ಞತೆಯಿಂದ ಸ್ಮರಿಸಲು" ಈ ವಿಶೇಷ ಸಂಚಿಕೆಯನ್ನು ಪ್ರಕಟಿಸಲಾಗಿದೆ ಎಂಬುದಾಗಿ ಸಂಪಾದಕರು ತಿಳಿಸಿದ್ದಾರೆ. ಆದರೆ ಕುವೆಂಪು ಅವರೆ ಶ್ರೀರಾಮಕೃಷ್ಣ ಆಶ್ರಮಕ್ಕೂ ಶ್ರೀರಾಮಕೃಷ್ಣ ವಿವೇಕಾನಂದರಿಗೂ ಎಷ್ಟು ಕೃತಜ್ಞರು ಎಂಬುದನ್ನು ಅನೇಕ ಸಲ, ಅನೇಕ ಕೃತಿಗಳಲ್ಲಿ ಹೃದಯತುಂಬಿ ಕೊಂಡಾಡಿದ್ದಾರೆ. ಅವರು ಜೀವನದಲ್ಲಿ ಏನಾದರೋ ಏನಾಗಿದ್ದರೋ ಅದಕ್ಕೆಲ್ಲ ಗುರುಮಹಾರಾಜರ, ಸ್ವಾಮಿಜಿಯ ಕೃಪಾಶೀರ್ವಾದವೇ ಭದ್ರಬುನಾದಿ. ಅವರ ಉಸಿರಿನ ಉಸಿರು, ಪ್ರಾಣದ ಪ್ರಾಣ, ಮನಸ್ಸಿನ ಆಧಾರವೇ ಗುರುಮಹಾರಾಜರು. ಈ ಮಹದ್ವಿಭೂತಿಗಳ ಕೃಪಾಶೀರ್ವಾದ ಸ್ವಾಮಿ ಸಿದ್ಧೇಶ್ವರಾನಂದರ ಮೂಲಕ ಅವರ ಮೇಲೆ ಹರಿದು ಬಾರದೆ ಇದ್ದಿದ್ದರೆ....? ಕುವೆಂಪು ಏನಾಗುತ್ತಿದ್ದರೊ ಆ ಗುರುಮಹಾರಾಜರಿಗೇ ಗೊತ್ತು. ಆ ಪರಮಕರುಣಾಸಿಂಧು ಪರಮಹಂಸರು, ಸಿಡಿಲು ಸಂನ್ಯಾಸಿ ಸ್ವಾಮಿ ವಿವೇಕಾನಂದರು ಅವರನ್ನು ಕೈಹಿಡಿದು ಎತ್ತಿಕೊಂಡು ತಮ್ಮೆದೆಗೆ ಒತ್ತಿಹಿಡಿದುಕೊಂಡು ತಾಯಿಯಂತೆ ರಕ್ಷಿಸಿದರು. ಸಹಜವಾಗಿಯೆ ಕುವೆಂಪು ವಿರಚಿತ ಸಾಹಿತ್ಯ ಶ್ರೀರಾಮಕೃಷ್ಣ ವಿವೇಕಾನಂದರ ಭಾವಕ್ಕೆ ಭಾಷೆಯಾಗಿ ಹೊರಹೊಮ್ಮಿತು. ಕುವೆಂಪು ಅವರ ಸಾಹಿತ್ಯ ಸಾರ್ಥಕ್ಯ ಪಡೆಯಿತು. ಕನ್ನಡ ಭಾಷೆಯೂ ಪಾವನವಾಯಿತು. ಕನ್ನಡ ಸಾಹಿತ್ಯ ಮಂಗಳಕರವಾಯಿತು. ಕನ್ನಡ ಜನಮನ ಅಧ್ಯಾತ್ಮದೀಪ್ತಿಯಲ್ಲಿ ಮಿಂದು ಪಾವನವಾಯಿತು. ಈ ಮಾತಿಗೆ ಅವರ ಅಪಾರ ಸಾಹಿತ್ಯವೆ ಸಾಕ್ಷಿ.



ಈ ವಿಶೇಷಾಂಕದಲ್ಲಿ ಕುವೆಂಪು ಅವರ ಸಾಮಾಜಿಕ ಕಳಕಳಿಯನ್ನು ಕುರಿತು ಗಮನ ಹರಿಸಿರುವುದು ವಿಶೇಷ. ಅವರ ಸಾಹಿತ್ಯವೆಲ್ಲ ಅವರಿಗಿದ್ದ ಸಾಮಾಜಿಕ ಕಳಕಳಿಯ ಅಭಿವ್ಯಕ್ತಿರೂಪ ಎಂದೇ ಹೇಳಬಹುದು. ಅವರು ಬರೆದದ್ದೆಲ್ಲವೂ ನಮ್ಮ ಸಮಾಜದ ಜನಮನವನ್ನು ಬೆಳಗುವುದಕ್ಕಾಗಿಯೇ; ಬೆಳೆಸುವುದಕ್ಕಾಗಿಯೆ. ಮೃಗಮಾನವನಾಗಿರುವ ಮನುಷ್ಯ ದೇವಮಾನವನಾಗಬೇಕೆಂಬ ಉನ್ನತ ಧ್ಯೇಯವೆ ಅವರ ಸಾಹಿತ್ಯದ ಜೀವಜೀವಾಳ ಎನ್ನಬಹುದು. ಆ ಅತಿಮಾನವ ಸ್ತರಕ್ಕೆ—ವಿಶ್ವಮಾನವತ್ವಕ್ಕೆ—ಮಾನವ ಊರ್ಧ್ವಮುಖಿಯಾಗಿ ಪಯಣಿಸಬೇಕೆಂಬ ಸಾಮಾಜಿಕ ಕಳಕಳಿ ಅವರದಾಗಿತ್ತು. ಅವರೇ ಹೇಳುವಂತೆ, ತಮ್ಮ ಸಾಹಿತ್ಯ-'ಬದುಕಿನಿಂದ ಬದುಕಿಗಾಗಿ, ಬದುಕಿನಾಚೆಯ ಬದುಕಿಗಾಗಿ' ಸೃಷ್ಟಿಯಾದದ್ದು. ಸಾಮಾಜಿಕ ಕಳಕಳಿ ಇಲ್ಲದ ಜೀವ, ಮೃತ ಜಡ ಪದಾರ್ಥದಂತೆ. ಕವಿಯ ಸೂಕ್ಷ್ಮ ಚೇತನಕ್ಕೆ ಸಾಮಾಜಿಕ ಕಳಕಳಿ ಇಲ್ಲದಿದ್ದರೆ ಉತ್ತಮ ಸಾಹಿತ್ಯ ಸೃಷ್ಟಿಯಾಗದು.

ಕವಿಗೇಕೆ ಸಾಮಾಜಿಕ ಕಳಕಳಿ, ಚಿಂತೆ? ಎಂದು ಕೇಳುವ ಒಂದು ಕಾಲವಿತ್ತು. ಹಿಂದಿನ ಆ ಕಾಲದ ಕವಿಗಳ ಕಾವ್ಯದ ಉದ್ದೇಶಗಳಲ್ಲಿ ಕೀರ್ತಿಸಂಪಾದನೆ, ಧನಾರ್ಜನೆ, ವ್ಯವಹಾರ ಜ್ಞಾನಾರ್ಜನೆ, ಅಮಂಗಳ ನಿವಾರಣೆ, ತತ್ಕಾಲದಲ್ಲಿ ಆನಂದ ಪ್ರಾಪ್ತಿ, ಕಾಂತೆಯಂತೆ ಉಪದೇಶ ಮಾಡುವುದು—ಇವು ಪ್ರಮುಖವಾಗಿದ್ದವು. ರಾಜಾಶ್ರಯ ಪಡೆದು ರಾಜನನ್ನು ಪ್ರತ್ಯಕ್ಷ ದೇವರೆಂದು ಹೊಗಳಿ ಕೈತುಂಬ ಧನಾರ್ಜನೆ ಮಾಡುವುದೆ ಅಂಥ ಕವಿಗಳ ಜೀವನೋದ್ದೇಶ, ಜೀವನದೃಷ್ಟಿ ಆಗಿತ್ತು. ಅವರು 'ಸಾಹಿತ್ಯವು ಒಂದು ಕಲೆ, ಕಲೆಗಾಗಿ ಕಲೆ' ಎಂದು ನಂಬಿದ್ದರು. ಅಂಥವರಿಗೆ ಜನರು ಬದುಕಿದ್ದಾರೊ, ಸತ್ತಿ



ಶ್ರೀ ಕೋ. ಚೆನ್ನಬಸಪ್ಪನವರು ನಿವೃತ್ತ ನ್ಯಾಯಾಧೀಶರು, ಚಿಂತಕರು ಹಾಗೂ ಸಾಹಿತಿಗಳು. ಹಲವಾರು ಉತ್ತಮ ಕೃತಿಗಳನ್ನು ರಚಿಸಿ ಕನ್ನಡ ಓದುಗರಿಗೆ ಚಿರಪರಿಚಿತರಾಗಿರುವರು.

*ಪ್ರಾಯೋಜಕರು* : ಹೋಟೆಲ್ ಶಾರದ ಲಾಡ್ಜಿಂಗ್, # 25 ಕೆಂಪೇಗೌಡ ಸರ್ಕಲ್, ಬೆಂಗಳೂರು –560 009

**ಕುವೆಂಪು ಹರಿಹರ ರಾಘವಾಂಕರ ಸಾಲಿಗೆ ಸೇರಿದ ಆಧುನಿಕ ಮಹಾಕವಿ. ಅವರೆ ಹೇಳುವಂತೆ : ಕಲೆಗಾಗಿ ಕಲೆ ಎಂಬುದು ದಾರಿಗಾಗಿ ದಾರಿ ಎಂಬಂತೆ ನಿರರ್ಥಕ ಮಾತು. ದೀಪಕ್ಕಾಗಿ ದೀಪ, ಅದಕ್ಕೆ ದಾರಿ ತೋರಿಸುವ ಉದ್ದೇಶವೇನೂ ಇಲ್ಲ ಎಂಬುದು ಅವಿವೇಕ.**

ದ್ದಾರೊ, ಸುಖವಾಗಿದ್ದಾರೊ ದುಃಖತಪ್ತರೊ ಎಂಬ ಕಾಳಜಿ ಇರಲೆ ಇಲ್ಲ. ಆದರೆ ಆ ಪ್ರಾಚೀನ ಕಾಲದಲ್ಲಿ ಹರಿಹರ ರಾಘವಾಂಕರಂಥ ಕವಿಗಳು ಜನ ಬದುಕಬೇಕೆಂದು ಕಾವ್ಯ ರಚನೆ ಮಾಡಿದ ಬಂಡಾಯ ಕವಿಗಳು. ಕುವೆಂಪು ಹರಿಹರ ರಾಘವಾಂಕರ ಸಾಲಿಗೆ ಸೇರಿದ ಆಧುನಿಕ ಮಹಾಕವಿ. ಅವರೆ ಹೇಳುವಂತೆ : ಕಲೆಗಾಗಿ ಕಲೆ ಎಂಬುದು ದಾರಿಗಾಗಿ ದಾರಿ ಎಂಬಂತೆ ನಿರರ್ಥಕ ಮಾತು. ದೀಪಕ್ಕಾಗಿ ದೀಪ, ಅದಕ್ಕೆ ದಾರಿ ತೋರಿಸುವ ಉದ್ದೇಶವೇನೂ ಇಲ್ಲ ಎಂಬುದು ಅವಿವೇಕ. ಆದ್ದರಿಂದ ಅವರು ಬರೆದದ್ದು ಜನರ ಬದುಕಿನ ಒಳಿತಿಗಾಗಿ, ಜನರ ಮೌಢ್ಯ, ದಾರಿದ್ರ್ಯ, ಅಜ್ಞಾನ, ಅನಾರೋಗ್ಯ, ಅನಕ್ಷರತೆ ಮುಂತಾದ ಸಾಮಾಜಿಕ ರೋಗನಿವಾರಣೆಗಾಗಿಯೆ ಎಂಬುದನ್ನು ಮುಚ್ಚುಮರೆಯಿಲ್ಲದೆ ಸಾರಿದರು. ಜನರ ಮೂಢನಂಬಿಕೆಗೆ ಭದ್ರಬುನಾದಿ ಆಗಿದ್ದ—ಈಗಲೂ ಆಗಿರುವ ಪೌರೋಹಿತ್ಯ ಶಾಹಿಯ ನಾಗಪಾಶದಿಂದ, ಉಡಹಿಡಿತದಿಂದ, ಕಪಿಮುಷ್ಟಿ ಯಿಂದ ಜನರನ್ನು ಬಿಡುಗಡೆ ಮಾಡುವ ಉದ್ದೇಶದಿಂದ ತಮ್ಮ ಲೇಖನಿಯನ್ನು ಝಳುಪಿಸಿದರು. ಪೌರೋಹಿತ್ಯ ಶಾಹಿಯ ಆಧಾರಸ್ತಂಭವಾಗಿದ್ದ ಅರಸೊತ್ತಿಗೆಯ ವಿರುದ್ಧ ಖಡ್ಗ ಬೀಸಿದರು. ವರ್ಣಾಶ್ರಮಧರ್ಮದ ಪ್ರತಿಪಾದಕರು ಧರ್ಮದ ಹೆಸರಿನಲ್ಲಿ ಮತಮೌಢ್ಯದ ಮದ್ದು ಕೊಟ್ಟು ಸಮಾಜದಲ್ಲಿ ಮೇಲುಕೀಳುಗಳನ್ನು ಸೃಷ್ಟಿಸಿದರು. ಅಂಥವರು 'ರಾಜಾ ಪ್ರತ್ಯಕ್ಷ ದೇವತಾ' ಎಂದು ಜನರನ್ನು ಸುಲಿಗೆ ಮಾಡಲು ನೆರವಾದರು. ದೊರೆಗಳು ಇಂಥ ಪುರೋಹಿತರನ್ನು 'ಭೂಸುರರು' ಎಂದು ಕೊಂಡಾಡಿ ಅಪಾರ ಧನಧಾನ್ಯ ಕನಕ ದಾನ ಮಾಡಿ ಶೋಷಣೆಗೆ ನೆರವಾದರು. ಇದನ್ನು ಕುವೆಂಪು ವಿರೋಧಿಸಿದರು. ಕಡೆಯ ಪುರೋಹಿತನ ಕರುಳು, ಕಡೆಯ ದೊರೆಯ ಕೊರಳಿಗುರುಳು ಬಿಗಿದ ಹೊರತು, ಬರಿಯ ನೆರಳು ಸ್ವಾತಂತ್ರ್ಯ ಸ್ವರ್ಗವು' ಎಂದು ಒಂದು ಚುಟುಕದಲ್ಲಿ ಸಾರು ತ್ತಾರೆ. 'ಮೌಢ್ಯಮೇಧ' ಎಂಬ ಇನ್ನೊಂದು ಕವಿತೆಯಲ್ಲೂ ಅದೇ ಮಾತನ್ನೇ ಹೇಳುತ್ತಾರೆ.

ಕುವೆಂಪು ಅವರ ಈ ದೃಷ್ಟಿ ಬೆಳೆಯಲು ಸ್ವಾಮಿ ವಿವೇಕಾ ನಂದರ ಜೀವನ ಸ್ಫೂರ್ತಿ ಆಗಿದ್ದಿರಬಹುದೆಂದು ತೋರು ತ್ತದೆ. ಜೊತೆಗೆ ಅವರ ಜೀವನಾನುಭವವೂ ಅದನ್ನು ಸಮರ್ಥಿಸಿತು. ಸ್ವಾಮಿ ವಿವೇಕಾನಂದರ ಸಾಹಿತ್ಯಾಭ್ಯಾಸದಿಂದ ಅವರಿಗಾದ ಪರಿಣಾಮವನ್ನು ಅವರೆ ಈ ರೀತಿ ಹೇಳುತ್ತಾರೆ:

"ಸ್ವಾಮಿ ವಿವೇಕಾನಂದರ ಬೆಂಕಿ ಹೊತ್ತಿಕೊಂಡು ನನ್ನನ್ನು ಉರಿಯುತ್ತಿತ್ತು! ಜ್ವಾಲಾಮುಖಿಯಾಗುತ್ತಿತ್ತು! ಅವರನ್ನು ಕುರಿತು ಮಾತನಾಡುವುದೆಂದರೆ ಅವರನ್ನು ಹೊಗಳು ವುದೆಂದರೆ ನನ್ನ ಜೀವ ಆನಂದಮಯವಾಗುತ್ತಿತ್ತು" (ನೆನಪಿನ ದೋಣಿಯಲ್ಲಿ, ಪು. ೪೫೨). ಸ್ವಾಮಿ ವಿವೇಕಾ ನಂದರ ಸಾಮಾಜಿಕ ಕಳಕಳಿಯೆ ಕುವೆಂಪು ಅವರ ಜೀವನದ ಆದರ್ಶವಾಗಿತ್ತು. ಸ್ವಾಮೀಜಿ ಭರತಖಂಡವನ್ನೆಲ್ಲ ಸುತ್ತಿ ಕನ್ಯಾಕುಮಾರಿ ಭೂಶಿರದ ಮೇಲೆ ನಿಂತು ಆಡಿದ ಮಾತು ಗಳು—ಓ ಸಾಧು ಸಂನ್ಯಾಸಿಗಳೆ, ಈ ದೇಶದ ದರಿದ್ರ ಮೂಕ ಜನರ ಒಳಿತಿಗಾಗಿ ನೀವೇನು ಮಾಡಿದ್ದೀರಿ?— ಎಂದು ಆರ್ತ ನಾದ ಮಾಡಿದ್ದು ಇವರಿಗೆ ಸಾಮಾಜಿಕ ಕಳಕಳಿಯ ಮಂತ್ರ ದೀಕ್ಷೆಯೆ ಆಗಿರಬೇಕು. ಅಮೆರಿಕೆಯಲ್ಲಿ ಆಗರ್ಭ ಶ್ರೀಮಂತರ ಮನೆಯಲ್ಲಿ ಸುಪ್ಪತ್ತಿಗೆಯ ಮೇಲೆ ಮಲಗಿದ್ದಾಗ ಭಾರತದ ಬಡಜನರ ಬವಣೆಯನ್ನು ನೆನೆದು ನಿದ್ದೆ ಬಾರದೆ ಕಣ್ಣೀರು ಸುರಿಸಿದ ಹೃದಯದ ದುಃಖ ದಾವಾನಲ ಇವರ ಹೃದಯ ವನ್ನೂ ದಹಿಸಿರಬೇಕು. ಅವರು ಅಮೆರಿಕೆಯಿಂದ ಹಿಂದಿರುಗಿ ಬಂದಮೇಲೆ ಗೋಸಂರಕ್ಷಣ ಸಂಘದವರು ಸ್ವಾಮೀಜಿಯ ಸಹಾಯವನ್ನು ಕೋರಿದಾಗ: "ಜನ ಹೊಟ್ಟೆಗಿಲ್ಲದೆ ಬರದಿಂದ ಬಳಲಿ ಸಾಯುತ್ತಿರುವಾಗ ನೀವು ಗೋಸಂರಕ್ಷಣೆ ಮಾಡು ತ್ತೀರಾ?" ಎಂದು ಕೇಳಿದಾಗ ಆ ಗೋಸಂರಕ್ಷಣ ದುರಂಧರ: "ಗೋವು ನಮ್ಮ ತಾಯಿ. ಜನ ಬರದಿಂದ ಸಾಯುವುದು ಅವರ ಕರ್ಮ" ಎಂದ. ಸ್ವಾಮೀಜಿ ಕೆಂಡಮಂಡಲವಾಗಿ : "ಹೌದು ದನಗಳೆ ನಿಮ್ಮ ತಾಯಂದಿರಾಗಿರಬೇಕು!" ಎಂದು ಝಾಡಿಸಿದರಂತೆ. ಜನರ ಹೊಟ್ಟೆ ಬಟ್ಟೆಯ ಸಮಸ್ಯೆಯ ಬಗ್ಗೆ ಸ್ವಾಮೀಜಿ 'ದರಿದ್ರ ನಾರಾಯಣ ಸೇವೆ' ಎಂದು ಸಾರಿ: "ದರಿದ್ರ ದೇವೋ ಭವ! ಪಾಪಿ ದೇವೋ ಭವ!" ಎಂಬ ನೂತನ ಮಂತ್ರವನ್ನು ಮೊಳಗಿದ ಪ್ರಪ್ರಥಮ ಕ್ರಾಂತಿವೀರ ಸಂನ್ಯಾಸಿ. ಅಂಥವರ ಶಿಷ್ಯತ್ವ ಪಡೆದ ಕುವೆಂಪು ತಮ್ಮ ಉಸಿರು ಇರುವವರೆಗೆ ದರಿದ್ರ ನಾರಾಯಣ ಸೇವೆಗಾಗಿಯೆ ತಮ್ಮ ಕಾವ್ಯಶಕ್ತಿಯನ್ನು ಪ್ರಯೋಗಿಸಿದರು. ಇದು ಅವರ ಸಾಮಾಜಿಕ ಕಳಕಳಿ.

ತಾವು ಮಲೆನಾಡಿನಲ್ಲಿ ಪ್ರತ್ಯಕ್ಷ ಕಂಡಿದ್ದ ಜನರ ಮೌಢ್ಯ, ದಾರಿದ್ರ್ಯ, ಅಜ್ಞಾನ, ಅನಾರೋಗ್ಯ, ಅರ್ಥವಿಲ್ಲದ ಕಂದಾಚಾರ, ಮದ್ಯವ್ಯಸನ, ಅಸ್ಪೃಶ್ಯತೆ, ಜೂಜಾಟ, ಮೇಲುಕೀಳುಗಳ ತಾರ ತಮ್ಯ, ಪುರೋಹಿತರ ಶೋಷಣೆ ಮತ್ತು ಮೂಢನಂಬಿಕೆಗಳ ಪೋಷಣೆ ಇತ್ಯಾದಿ ಇತ್ಯಾದಿ ಸಾಮಾಜಿಕ ಸಮಸ್ಯೆಗಳ ಬಗ್ಗೆ ಅವರು ತಮ್ಮ ಜೀವನದ ಉದ್ದಕ್ಕೂ—ವಿದ್ಯಾರ್ಥಿದೆಸೆಯಿಂದ ರಾಷ್ಟ್ರಕವಿ ಪ್ರಶಸ್ತಿ ವಿಜೇತರಾಗಿ ವಿಖ್ಯಾತರಾಗುವವರೆಗೆ— ಅಪಾರ ಸಾಹಿತ್ಯ ರಚಿಸಿದರು. ಜಲಗಾರ, ಶೂದ್ರತಪಸ್ವಿಯಂಥ ನಾಟಕಗಳಲ್ಲಿ ಪಾಂಚಜನ್ಯ, ಕೋಗಿಲೆ ಮತ್ತು ಸೋವಿಯತ್

ರಷ್ಯಾ, ಕೃತ್ತಿಕೆ ಮುಂತಾದ ಕವನ ಸಂಗ್ರಹಗಳಲ್ಲಿ ಕಾನೂರು ಹೆಗ್ಗಡಿತಿ, ಮಲೆಗಳಲ್ಲಿ ಮದುಮಗಳು ಕಾದಂಬರಿಗಳಲ್ಲಿ.... ಅದು ಇದು ಎಂದು ಹೇಳುವುದೆ ಬೇಡ, ಅವರ ಸಾಹಿತ್ಯದಲ್ಲಿ ಓತಪ್ರೋತವಾಗಿ ಬಡತನ, ಗೊಬ್ಬರ, ಹಾರೆ, ಗುದ್ದಲಿ, ನೆತ್ತರು, ಶೋಷಣೆ, ಕ್ರಾಂತಿಯ ವಿಚಾರ ಅದ್ಭುತವಾಗಿ ಮೂಡಿ ಬಂದಿದೆ. ಅದೆಲ್ಲ ಅವರ ಸಾಮಾಜಿಕ ಕಳಕಳಿಗೆ ಸಾಕ್ಷಿ.

ಹೌದು, ಇದೆಲ್ಲ ಅವರ ಸಾಹಿತ್ಯದಲ್ಲಿ ಮೂಡಿಬಂದಿದೆ. ಅದೆಲ್ಲ 'ಪುಸ್ತಕದ ಬದನೆಕಾಯಿ', 'ಬಾಯ ಬ್ರಹ್ಮ', 'ಆರಾಂ ಆಸನದ' ರಾಜಕಾರಣಿಯ ಉಪದೇಶದಂತೆ ಎಂದು ಯಾರಾದರೂ ಆಕ್ಷೇಪಿಸಬಹುದು. ಯಾಕೆಂದರೆ ಅವರು ಹರಿಜನರ ಕೇರಿಗೆ ಹೋಗಿ ಜಲಗಾರನಂತೆ ಕಸಗುಡಿಸಿ ಸ್ವಚ್ಛ ಮಾಡಿದರೆ? ಕರಿಸಿದ್ದ ಗಿಡ್ಡಿಯರ ಗುಡಿಸಿಲಿಗೆ ಹೋಗಿ ಯಾವ ರೋಗಿಯನ್ನಾದರೂ ಆರೈಕೆ ಮಾಡಿದರೆ? ಆರೋಗ್ಯ ತಪಾಸಣಾ ಶಿಬಿರಗಳನ್ನು ನಡೆಸಿದರೆ? ಹೀಗೆ ಏನೂ ಮಾಡಲಿಲ್ಲ. ಸಾಮಾಜಿಕ ಕಳಕಳಿ ವಾಸ್ತವ ಕರ್ಮವಾಗಿ ಪರಿವರ್ತನೆಯಾಯಿತೆ? ಸಮಾಜ ಸೇವೆ ಎಂಬ ಹೆಸರಿನಲ್ಲಿ ವೃದ್ಧಾಪ್ಯವೇತನ, ವಿಧವಾ ವೇತನ.... ಮುಂತಾದ ವೇತನಗಳನ್ನು ಕೊಡಿಸುವುದೇ ಸಮಾಜ ಸೇವೆ ಎಂದು ಭಾವಿಸಿರುವ ರಾಜಕೀಯ ಸಮಾಜಸೇವಕರಿಗೆ ಒಬ್ಬ ಕವಿ ಸಮಾಜಸೇವೆ ಮಾಡಿದ್ದು ಕಣ್ಣಿಗೆ ಕಾಣುವುದಿಲ್ಲ. 'ಸೇವೆ ಮಾಡುವುದು' ಎಂದರೆ ಗುದ್ದಲಿ ಹಾರೆ ಹಿಡಿದು ನೆಲ ಅಗೆಯುವ ಸ್ಥೂಲಕಾರ್ಯ ಮಾತ್ರವಲ್ಲ. ಜನರ ಮನವನ್ನು ಹಸನು ಮಾಡುವ, ಅವರಿಗೆ ಉದ್ಧಾರದ ದಾರಿತೋರಿಸುವ ಮಾನಸಿಕ ಸೂಕ್ಷ್ಮ, ಕಾರಣಕಾಯಕವಾದ ಕಾವ್ಯರಚನಾ ಕಾರ್ಯವೂ (ಸ್ಥೂಲಶರೀರ, ಸೂಕ್ಷ್ಮಶರೀರ, ಕಾರಣಶರೀರ ಇರುವಂತೆ ಕರ್ಮದಲ್ಲೂ ಸ್ಥೂಲ, ಸೂಕ್ಷ್ಮ, ಕಾರಣ ಕರ್ಮಗಳೂ ಉಂಟೆಂಬ ಅರ್ಥದಲ್ಲಿ) ಘನತರವಾದ ಸಮಾಜ ಸೇವೆಯೇ. ಆ ಮಾತನ್ನು ಕುವೆಂಪು ಅವರು ತಮಗೆ ರಾಷ್ಟ್ರಕವಿ ಪ್ರಶಸ್ತಿ ಪ್ರದಾನ ಮಾಡಿದ ಸಂದರ್ಭದಲ್ಲಿ ಹೀಗೆ ನಿವೇದಿಸಿದ್ದಾರೆ: "ನಾನು ಲಾಠಿ ಏಟು ತಿಂದಿಲ್ಲ; ಸೆರೆಮನೆಗೆ ಹೋಗಿಲ್ಲ; ಬ್ರಿಟಿಷರ ವಿರುದ್ಧವಾಗಿ.... ವಿದ್ಯಾರ್ಥಿ ಮೆರವಣಿಗೆಗಳಲ್ಲಿ ಕೂಗಿಕೊಂಡು ಅಲೆದಿದ್ದೇನೆ.... ನಿಮ್ಮಲ್ಲಿ ಅನೇಕರು ಸ್ವಾತಂತ್ರ್ಯ ಸಂಗ್ರಾಮದಲ್ಲಿ ಕಾಲಾಳುಗಳಾಗಿ, ದಳಪತಿಗಳಾಗಿ ಹೋರಾಡಿದ್ದೀರಿ... ಕೆಲವರು ದೇಶಕ್ಕಾಗಿ ಮನೆಮಾರು ಜೀವನವೃತ್ತಿಗಳನ್ನು ತ್ಯಾಗಮಾಡಿದ್ದೀರಿ. ಕೆಲವರು ಲಾಠಿ ಏಟು ತಿಂದಿದ್ದೀರಿ, ಸೆರೆಮನೆಗಳಲ್ಲಿ ತಪಸ್ಸು ಮಾಡಿದ್ದೀರಿ. ಮತ್ತೆ ಕೆಲವರು ನೇರವಾಗಿ ಸಂಗ್ರಾಮದಲ್ಲಿ ಭಾಗಿ ಆಗದಿದ್ದರೂ.... ಬಂಧು ಮಿತ್ರರನ್ನು ಸ್ವಾತಂತ್ರ್ಯಕಾಳಿಗೆ ಬಲಿತೆತ್ತು ದಾವಾಗ್ನಿಯಲ್ಲಿ ಬೆಂದಿದ್ದೀರಿ" ಎಂಬುದನ್ನು ಸ್ಮರಿಸಿ "ನಾನೇನು ಮಾಡಿದೆ? ನನಗೇಕೆ ಈ ಪುರಸ್ಕಾರ?" ಎಂಬ ಪ್ರಶ್ನೆಗೆ ಉತ್ತರವಾಗಿಯೊ ಎಂಬಂತೆ ಕುವೆಂಪು ಮುಂದುವರಿದು ಹೀಗೆ ಹೇಳಿದ್ದಾರೆ: "ಆದರೆ ದೇಶದಲ್ಲಿ ಏನು ನಡೆಯುತ್ತಿದ್ದದ್ದು.... ಎಂಬುದರ ಅರಿವು ಮಲೆನಾಡಿನ ಕಾಡಿನ ಮೂಲೆಯಿಂದ ಬಂದ ಬಾಲಕನ ಗ್ರಾಮೀಣ ಪ್ರಜ್ಞೆಗೆ ಗೋಚರವಾದ ಮೇಲೆ ಸುಮಾರು ೧೯೨೫-೨೬ರಿಂದ ೧೯೪೭-೪೮ರವರೆಗೆ ನಡೆದ ಭಾರತದ ಜಗನ್ಮಹಾದ್ಭುತ ಸ್ವಾತಂತ್ರ್ಯ ಸಂಗ್ರಾಮದಲ್ಲಿ ನನ್ನ ಕವಿಚೇತನ ಸಮುದ್ರ ಸಂಪೂರ್ಣ ಮಗ್ನವಾಗಿ ಬಿಟ್ಟಿತು..... ಆ ಕಾಲದಲ್ಲಿ ನಡೆದ ಯಾವ ಘಟನೆಯೂ ಬಹುಶಃ ನನ್ನ ಲೇಖನಿಯಿಂದ ವಂಚಿತವಾಗಿಲ್ಲ" ಎಂದು ಹೇಳಿ— "ಅದೇ ನಾನು ದೇಶಸೇವೆ ಮಾಡಿದ ರೀತಿ" ಎಂದು ಘೋಷಿಸಿದ್ದಾರೆ. ಹೀಗೆ ಕಾವ್ಯರಚನೆ ಮಾಡುವುದೂ ದೇಶಸೇವೆಯೇ! ಆ ಸೇವೆ ಶಾಲೆ, ಸೇತುವೆ, ಆಸ್ಪತ್ರೆ, ಇತ್ಯಾದಿ ಕಟ್ಟಿಸುವುದಕ್ಕಿಂತ ಶಾಶ್ವತ ಸೇವೆ. ಶ್ರೀಕೃಷ್ಣ ಮಹಾಭಾರತ ಯುದ್ಧದಲ್ಲಿ ಒಮ್ಮೆಯಾದರೂ ಬಾಣಪ್ರಯೋಗ ಮಾಡಲಿಲ್ಲ. ತನ್ನ ಸಹಾಯಕ್ಕಾಗಿ ಬೇಡಿ ಬಂದ ಅರ್ಜುನ ದುರ್ಯೋಧನರಿಗೆ ಅದೇ ಮಾತು ಹೇಳಿದ: "ನನ್ನಲ್ಲಿ ಸೈನ್ಯವಿಲ್ಲ. ನಾನು ಯುದ್ಧಮಾಡುವುದಿಲ್ಲ. ಅಸ್ತ್ರ ಹಿಡಿಯುವುದಿಲ್ಲ; ಪ್ರಯೋಗ ಮಾಡುವುದಿಲ್ಲ. ಈ ರೀತಿ ಸಹಾಯ ಕಾರ್ಯ ಮಾಡುವುದಿಲ್ಲ. ಅಂಥ ಸಹಾಯ ಬೇಕಿದ್ದರೆ ನಮ್ಮಣ್ಣನ ಬಳಿಗೆ ಹೋಗಿ" ಎನ್ನುತ್ತಾನೆ. ಆದರೂ ಅರ್ಜುನ ಕೃಷ್ಣನೇ ಬೇಕೆನ್ನುತ್ತಾನೆ. ಪಾಂಡವರ ಪಕ್ಷಕ್ಕೆ ನಿಂತರೂ ಕೃಷ್ಣ ಅಸ್ತ್ರಪ್ರಯೋಗ ಮಾಡಲಿಲ್ಲ. ಬಿಲ್ಲೆತ್ತಲಿಲ್ಲ. ಬಾಣಪ್ರಯೋಗ ಮಾಡಲಿಲ್ಲ. ಕೇವಲ ರಥದ ಸಾರಥಿಯಾಗಿದ್ದ. ರಥವನ್ನು ಎಲ್ಲಿಗೆ ಹೊಡೆಯೆಂದರೆ ಅಲ್ಲಿಗೆ ಹೊಡೆದುಕೊಂಡು ಹೋದ. ಯುದ್ಧರಂಗದ ಮಧ್ಯದಲ್ಲಿ ರಥ ನಿಲ್ಲಿಸಿದ. ಅಲ್ಲೇನು ಮಾಡಿದ ಎಂಬುದು ಲೋಕವಿಖ್ಯಾತ. ಮುಖಹೇಡಿಯಾಗಿ ಬಿಲ್ಲುಬಾಣಬತ್ತಳಿಕೆಯನ್ನು ಬಿಸುಟು ವಿಷಾದದಿಂದ ಖಿನ್ನನಾಗಿದ್ದ, ಭಯಗ್ರಸ್ತನಾಗಿದ್ದ ಅರ್ಜುನನ್ನು ಕರ್ಮ ತತ್ಪರನಾಗುವಂತೆ ಪ್ರಚೋದಿಸಿದ, ಪ್ರೋತ್ಸಾಹಿಸಿದ. ಇದು ಶ್ರೀಕೃಷ್ಣ ಧರ್ಮಸಂಸ್ಥಾಪನೆಗಾಗಿ ಮಾಡಿದ ಸೇವೆ. ಕುವೆಂಪು ಈ ನಾಡಿಗೆ, ನುಡಿಗೆ, ದೇಶಕ್ಕೆ ಮಾಡಿದ ಸೇವೆ—ಈ ರೀತಿಯ ಸೇವೆ. ಅವರ ಸಾಮಾಜಿಕ ಕಳಕಳಿ ಯಾವರೀತಿ ಕೃತಿಯಾಗಿ ಮೈತಾಳಿತು ಎಂದರೆ, 'ಸತ್ತಂತಿಹರನು ಬಡಿದೆಚ್ಚರಿಸುವ' ರೀತಿಯಾಗಿ 'ಪಾಂಚಜನ್ಯ'ವಾಯಿತು. ಅದಕ್ಕಿಂತ ಹೆಚ್ಚಿನ ಸಮಾಜ ಸೇವೆ, ಸಾಮಾಜಿಕ ಕಳಕಳಿ ಏನುಂಟು?

'ಸೇವೆ ಮಾಡುವುದು' ಎಂದರೆ ಗುದ್ದಲಿ ಹಾರೆ ಹಿಡಿದು ನೆಲ ಅಗೆಯುವ ಸ್ಥೂಲಕಾರ್ಯ ಮಾತ್ರವಲ್ಲ. ಜನರ ಮನವನ್ನು ಹಸನು ಮಾಡುವ, ಅವರಿಗೆ ಉದ್ಧಾರದ ದಾರಿತೋರಿಸುವ ಮಾನಸಿಕ ಸೂಕ್ಷ್ಮ, ಕಾರಣಕಾಯಕವಾದ ಕಾವ್ಯರಚನಾ ಕಾರ್ಯವೂ ಘನತರವಾದ ಸಮಾಜಸೇವೆಯೇ.

ಪ್ರಾಯೋಜಕರು : ಯೂನಿಟ ಆಫ್‌ಸೆಟ್ ಪ್ರಿಂಟರ್ಸ್, # 45/5A, ಗುಬ್ಬಣ್ಣ ಇಂಡಸ್ಟ್ರಿಯಲ್ ಎಸ್ಟೇಟ್, 6th ಬ್ಲಾಕ್, ರಾಜಾಜಿನಗರ, ಬೆಂಗಳೂರು -560 010